**ರಾಮಲಿಂಗಾರೆಡ್ಡಿ**
ಸಾರಿಗೆ ಮತ್ತು ಮುಜರಾಯಿ ಸಚಿವರು
ಹಾಗೂ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ 315-315ಎ,
3ನೇ ಮಹಡಿ, ವಿಧಾನಸೌಧ,
ಬೆಂಗಳೂರು - 560 001
ದೂರವಾಣಿ: 080-22252536,
22033450
ಇ-ಮೇಲ್: rlrtmmk@gmail.com

ಸಂಖ್ಯೆ ಸಾಮುಮ/ 576/2023-24

ದಿನಾಂಕ 23.01.24

## ಟಿಪ್ಪಣಿ

ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಹಿರೇಮಗಳೂರು ಶ್ರೀ ಕೋದಂಡರಾಮಸ್ವಾಮಿ ದೇವಾಲಯದ ಅರ್ಚಕರಿಗೆ ಹೆಚ್ಚುವರಿಯಾಗಿ ಪಾವತಿಸಿರುವ ತಸ್ತೀಕ್ ಮೊತ್ತವನ್ನು ದೇವಾಲಯದ ಖಾತೆಗೆ ಹಿಂದಿರುಗಿಸುವ ಸಂಬಂಧ ತಹಶೀಲ್ದಾರ್ ಚಿಕ್ಕಮಗಳೂರು ಇವರು ಅರ್ಚಕರಿಗೆ ನೀಡಿರುವ ನೋಟೀಸಿಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆಯಲಾಗಿದೆ.

ಇದರಂತೆ ಸದರಿ ದೇವಾಲಯಕ್ಕೆ 2013-14 ರಿಂದ 2016-17ರವರೆಗೆ ವಾರ್ಷಿಕ ರೂ.24,000/-(ಇಪ್ಪತ್ತಾಲ್ಕು ಸಾವಿರ)ಗಳನ್ನು ತಸ್ತೀಕ್ ಮೊತ್ತವಾಗಿ ಅರ್ಚಕರಿಗೆ ಪಾವತಿಸಬೇಕಿದ್ದು, ತಪ್ಪಾಗಿ ವಾರ್ಷಿಕ ರೂ.90,000/-ಗಳಂತೆ ಪಾವತಿಸಿದ್ದು, ಹೆಚ್ಚುವರಿಯಾಗಿ ವಾರ್ಷಿಕವಾಗಿ ರೂ.66,000/-ಗಳನ್ನು ಪಾವತಿಸಲಾಗಿದ್ದು ಹಾಗೂ 2017-18ನೇ ಸಾಲಿನ 2021-22ನೇ ಸಾಲಿನವರೆಗೆ ವಾರ್ಷಿಕ ರೂ.48,000/-ಗಳ ತಸ್ತೀಕ್ ಮೊತ್ತ ಅರ್ಚಕರಿಗೆ ಪಾವತಿಸಬೇಕಿದ್ದು, ತಪ್ಪಾಗಿ ವಾರ್ಷಿಕ ರೂ.90,000/-ಗಳಂತೆ ಪಾವತಿಸಿದ್ದು, ಹೆಚ್ಚುವರಿಯಾಗಿ ವಾರ್ಷಿಕವಾಗಿ ರೂ.42,000/-ಗಳಂತೆ ಪಾವತಿಸಲಾಗಿರುವುದು ತಿಳಿದು ಬಂದಿರುತ್ತದೆ.

ಈ ಹೆಚ್ಚುವರಿಯಾಗಿ ಪಾವತಿಸಲಾದ ಮೊತ್ತ ರೂ.4,74,000/-( ನಾಲ್ಕು ಲಕ್ಷದ ಎಪ್ಪತ್ತಾಲ್ಕು ಸಾವಿರ ಮಾತ್ರ)ಗಳನ್ನು ದೇವಾಲಯದ ನಿಧಿಗೆ ಮರು ಪಾವತಿಸಲು ತಹಶೀಲ್ದಾರ್ ಚಿಕ್ಕಮಗಳೂರು ರವರು ದಿನಾಂಕ:02.12.2023 ರಲ್ಲಿ ತಿಳುವಳಿಕೆ ಪತ್ರ ನೀಡಿರುತ್ತಾರೆ. ಸದರಿ ನೋಟೀಸ್ ಅನ್ನು ವಾಪಸ್ಸು ಪಡೆದು ತಪ್ಪಾಗಿ ಪಾವತಿ ಮಾಡಿರುವ ಸಂಬಂಧಪಟ್ಟ ಆ ಸಮಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ತಹಶೀಲ್ದಾರ್ ಹಾಗೂ ಸಿಬ್ಬಂದಿಯ ವಿರುದ್ಧ ವಿಚಾರಣೆ ನಡೆಸಿ, ವಸೂಲಿ ಮಾಡಿ ಜಮಾ ಮಾಡಲು ಸೂಚಿಸಲಾಗಿದೆ.

(ರಾಮಲಿಂಗಾರೆಡ್ಡಿ)

ಗೆ,
ಜಿಲ್ಲಾಧಿಕಾರಿಗಳು,
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.